**ಪ್ರಸಾರವಾದ ಮತ್ತು ವಿತರಿಸಲಾದ ಶುಕ್ರವಾರದ ಪ್ರವಚನ (ಖುತ್ಬಾ)**

**ದಿನಾಂಕ: 29 ರಬೀಉಲ್ ಅವ್ವಲ್ 1448 ಹಿಜ್ರಿ / 11 ಸೆಪ್ಟೆಂಬರ್ 2026**

# ವಿಷಯ: ಮಕ್ಕಳ ಪಾಲನೆ ಮತ್ತು ಪೋಷಣೆ (ತರ್ಬಿಯತುಲ್ ಅವ್ಲಾದ್)

## ಮೊದಲನೇ ಪ್ರವಚನ:

**ಎಲ್ಲ ಪ್ರಶಂಸೆಗಳೂ ಅಲ್ಲಾಹನಿಗೆ ಮಾತ್ರ ಸಲ್ಲುತಕ್ಕದ್ದು. ನಾವು ಅವನನ್ನೇ ಸ್ತುತಿಸುತ್ತೇವೆ, ಅವನಲ್ಲೇ ಸಹಾಯವನ್ನು ಹಾಗೂ ಕ್ಷಮೆಯನ್ನು ಯಾಚಿಸುತ್ತೇವೆ. ನಮ್ಮ ಆತ್ಮಗಳ ಕೆಡುಕುಗಳಿಂದ ಮತ್ತು ದುಷ್ಕೃತ್ಯಗಳಿಂದ ಅಲ್ಲಾಹನಲ್ಲಿ ರಕ್ಷಣೆ ಬೇಡುತ್ತೇವೆ. ಅಲ್ಲಾಹನು ಯಾರಿಗೆ ಸನ್ಮಾರ್ಗ ತೋರುತ್ತಾನೋ ಅವನನ್ನು ದಾರಿ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ; ಮತ್ತು ಯಾರನ್ನು ದಾರಿ ತಪ್ಪಿಸುತ್ತಾನೋ ಅವನಿಗೆ ಸನ್ಮಾರ್ಗ ತೋರಲು ಯಾರಿಂದಲೂ ಸಾಧ್ಯವಿಲ್ಲ. ಅಲ್ಲಾಹನನ್ನು ಹೊರತುಪಡಿಸಿ ಆರಾಧನೆಗೆ ಅರ್ಹನಾದವನು ಬೇರಾರೂ ಇಲ್ಲ, ಅವನು ಏಕನು, ಅವನಿಗೆ ಯಾವುದೇ ಪಾಲುದಾರರಿಲ್ಲ ಎಂದೂ ಮುಹಮ್ಮದ್ ﷺ ಅವರು ಅಲ್ಲಾಹನ ದಾಸ ಮತ್ತು ಪ್ರವಾದಿಯಾಗಿದ್ದಾರೆ ಎಂದೂ ನಾನು ಸಾಕ್ಷಿ ಹೇಳುತ್ತೇನೆ. ಅವರು ಆತನ ಸಮಸ್ತ ಸೃಷ್ಟಿಗಳಲ್ಲಿ ಅತಿ ಶ್ರೇಷ್ಠರೂ ಅತ್ಯಂತ ಪ್ರಿಯರೂ ಆಗಿದ್ದಾರೆ. ಅವರು ನೀಡಲಾದ ಅಮಾನತ್ತನ್ನು ಅತ್ಯಂತ ಪ್ರಾಮಾಣಿಕತೆಯಿಂದ ತಲುಪಿಸಿದರು, ಪ್ರವಾದಿತ್ವದ ಸಂದೇಶವನ್ನು ಪ್ರಸರಿಸಿದರು, ಮತ್ತು ದೈವಿಕ ಮಾರ್ಗದಲ್ಲಿ ಅಂತಿಮ ಉಸಿರಿರುವವರೆಗೆ ಸತ್ಯದ ಪರವಾಗಿ ಸತತ ಹೋರಾಟ ನಡೆಸಿದರು. ಅಲ್ಲಾಹನು ಅವರ ಮೇಲೆಯೂ, ಅವರ ಪರಿವಾರದವರ ಮೇಲೆಯೂ ಮತ್ತು ಸಹಚರರ (ಸಹಾಬಿಗಳ) ಮೇಲೆಯೂ ಅನಂತ ಶುಭ ಹಾರೈಕೆ ಹಾಗೂ ಶಾಂತಿಯನ್ನು ಸುರಿಸಲಿ.**

**"ಓ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಅಂಜಬೇಕಾದ ರೀತಿಯಲ್ಲಿ ಅಂಜಿರಿ ಮತ್ತು ಮುಸ್ಲಿಮರಾಗದ ಹೊರತು ಮರಣ ಹೊಂದಬೇಡಿರಿ." [ಕುರ್‌ಆನ್ - ಆಲ್ ಇಮ್ರಾನ್: 102]**

**ಅತ್ಯಂತ ಸತ್ಯವಾದ ಮಾತು ಅಲ್ಲಾಹನ ಗ್ರಂಥ (ಕುರ್‌ಆನ್) ಆಗಿದೆ ಮತ್ತು ಶ್ರೇಷ್ಠವಾದ ಮಾರ್ಗದರ್ಶನ ಮುಹಮ್ಮದ್ ﷺ ಅವರ ಮಾರ್ಗದರ್ಶನವಾಗಿದೆ. ಧರ್ಮದಲ್ಲಿ ಹೊಸದಾಗಿ ಸೇರಿಸಲಾದ ಪ್ರತಿಯೊಂದು ವಿಷಯವೂ ಕೆಡುಕಾಗಿದೆ, ಅಂತಹ ಪ್ರತಿಯೊಂದು ನವೀನತೆಯೂ ಅಧರ್ಮದ ಬಿದ್ ಅತ್ ಅಥವಾ ನವೀನಾಚಾರವಾಗಿದೆ, ಪ್ರತಿಯೊಂದು ಬಿದ್ ಅತ್ ದಾರಿಗೇಡಿತನವಾಗಿದೆ ಮತ್ತು ಪ್ರತಿಯೊಂದು ದಾರಿಗೇಡಿತನದ ಅಂತ್ಯ ನರಕವಾಗಿದೆ.**

**ಅಲ್ಲಾಹನ ದಾಸರೇ:** ಸಂತಾನ ಎಂಬುದು ಅಲ್ಲಾಹನು ತಾನು ಇಚ್ಛಿಸಿದ ದಾಸರಿಗೆ ನೀಡುವ ದಿವ್ಯ ಅನುಗ್ರಹ ಮತ್ತು ರಬ್ಬಾನಿ ಕೊಡುಗೆಯಾಗಿದೆ. ಅಲ್ಲಾಹನು ಹೇಳುತ್ತಾನೆ:

"ಅಲ್ಲಾಹನು ನಿಮಗಾಗಿಯೇ ನಿಮ್ಮಿಂದಲೇ ಜೋಡಿಗಳನ್ನು ಮಾಡಿದನು ಮತ್ತು ಆ ಜೋಡಿಗಳಿಂದ ನಿಮಗಾಗಿ ಮಕ್ಕಳು ಮತ್ತು ಮೊಮ್ಮಕ್ಕಳನ್ನು ನೀಡಿದನು. ಹಾಗೂ ನಿಮಗಾಗಿ ಪರಿಶುದ್ಧವಾದವುಗಳಿಂದ ಉಪಜೀವನವನ್ನು ಒದಗಿಸಿದನು." (ಕುರ್‌ಆನ್ - ಅನ್ನಹ್ಲ್: 72)

ಮಕ್ಕಳು ಈ ಐಹಿಕ ಜೀವನದ ಶೃಂಗಾರ ಹಾಗೂ ಸಂತೋಷವಾಗಿದ್ದಾರೆ. ಅವರು ಪ್ರಕೃತಿಯು ನೀಡುವ ಅತ್ಯಂತ ಅಮೂಲ್ಯವಾದ ಉಡುಗೊರೆಯಾಗಿದ್ದಾರೆ. ಅವರು ಸನ್ಮಾರ್ಗದಲ್ಲಿದ್ದರೆ ಮತ್ತು ಸತ್ಕರ್ಮಗಳನ್ನು ಮಾಡುತ್ತಿದ್ದರೆ ಕಣ್ಣುಗಳು ತಂಪಾಗುತ್ತವೆ, ಮನಸ್ಸು ಶಾಂತಿ ಪಡೆಯುತ್ತದೆ ಮತ್ತು ಹೃದಯವು ಆನಂದಿಸುತ್ತದೆ. ಆದ್ದರಿಂದಲೇ ಅಲ್ಲಾಹನ ಉತ್ತಮ ದಾಸರು ಹೀಗೆ ಪ್ರಾರ್ಥಿಸುತ್ತಾರೆ:

"ನಮ್ಮ ಒಡೆಯನೇ! ನಮ್ಮ ಪತ್ನಿಯರಿಂದ ಮತ್ತು ಸಂತಾನಗಳಿಂದ ನಮಗೆ ಕಣ್ಣಿನ ತಂಪನ್ನು ಕರುಣಿಸು ಹಾಗೂ ನಮ್ಮನ್ನು ಧರ್ಮನಿಷ್ಠರಿಗೆ ನಾಯಕರನ್ನಾಗಿ ಮಾಡು."(ಕುರ್‌ಆನ್ - ಅಲ್-ಫುರ್ಕಾನ್: 74)

ಅಲ್ಲಾಹನು ತನ್ನ ದಾಸನಿಗೆ ನೀಡುವ ಅತ್ಯಂತ ಶ್ರೇಷ್ಠ ಅನುಗ್ರಹವೆಂದರೆ, ಅವನ ಸಂತತಿಯಿಂದ ಏಕೈಕ ಅಲ್ಲಾಹನನ್ನು ಮಾತ್ರ ಆರಾಧಿಸುವವರು ಹುಟ್ಟುವುದು. ತನ್ನ ಮಗನು ಕಣ್ಣೆದುರಿಗೆ ನಮಾಝ್ ನಿರ್ವಹಿಸುವುದನ್ನು ಮತ್ತು ಕುರ್‌ಆನ್ ಪಠಿಸುವುದನ್ನು ನೋಡುವ ತಂದೆಯ ಹೃದಯವು ಅಪಾರ ಆನಂದ ಮತ್ತು ಸೌಭಾಗ್ಯದಿಂದ ತುಂಬಿಹೋಗುತ್ತದೆ. ಆದ್ದರಿಂದ ಮಕ್ಕಳ ಸನ್ಮಾರ್ಗವು ಒಂದು ಶ್ರೇಷ್ಠ ಬಯಕೆ ಹಾಗೂ ಕರುಣಾಮಯಿಯಾದ ಅಲ್ಲಾಹನ ವಿಶೇಷ ಅನುಗ್ರಹವಾಗಿದೆ.

**ಓ ಸತ್ಯವಿಶ್ವಾಸಿಗಳೇ:** ಮಕ್ಕಳ ಪೋಷಣೆ ಮತ್ತು ಸಂಸ್ಕಾರ (ತರ್ಬಿಯತ್) ಎಂಬುದು ಅತ್ಯಂತ ದೊಡ್ಡ ಜವಾಬ್ದಾರಿ ಹಾಗೂ ಗುರುತರವಾದ ಕರ್ತವ್ಯವಾಗಿದೆ. ವಿಶೇಷವಾಗಿ ಆಧುನಿಕ ಯುಗದಲ್ಲಿ ನಾವು ಎದುರಿಸುತ್ತಿರುವ ಸವಾಲುಗಳ ನಡುವೆ ಇದು ಇನ್ನಷ್ಟು ಮಹತ್ವದ್ದಾಗಿದೆ. ಉತ್ತಮ ಸಂಸ್ಕಾರ ನೀಡಲು ತಾಳ್ಮೆ, ವಿವೇಕ, ಸಮಾಧಾನ ಮತ್ತು ಬುದ್ಧಿವಂತಿಕೆಯ ಅಗತ್ಯವಿದೆ. ಇಂದಿನ ಮಕ್ಕಳ ಪೋಷಣೆ ಹಿಂದಿನಂತಿಲ್ಲ; ಮಾಧ್ಯಮಗಳು ಬದಲಾಗಿವೆ, ಪ್ರಭಾವ ಬೀರುವ ಅಂಶಗಳು ಹೆಚ್ಚಾಗಿವೆ ಮತ್ತು ಸವಾಲುಗಳು ತೀವ್ರಗೊಂಡಿವೆ. ಇಂದಿನ ಮಗು ಮುಕ್ತ ಜಗತ್ತಿನಲ್ಲಿ ಜೀವಿಸುತ್ತಿದ್ದು, ಹೆತ್ತವರು ಹಾಗೂ ಶಿಕ್ಷಕರಿಂದ ಕೇಳುವುದಕ್ಕಿಂತ ಹೆಚ್ಚಾಗಿ ಈ ಡಿಜಿಟಲ್ ಮಾಧ್ಯಮಗಳಿಂದ ನೋಡುತ್ತಾ, ಕೇಳುತ್ತಾ ಪ್ರಭಾವಿತನಾಗುತ್ತಿದ್ದಾನೆ.

ಆದ್ದರಿಂದ ಇಂದಿನ ಸಂಸ್ಕಾರವು ದಿನನಿತ್ಯದ ಜಿಹಾದ್ ಮತ್ತು ನಿರಂತರ ತಾಳ್ಮೆಯಾಗಿದೆ. ಅಲ್ಲಾಹನು ಹೇಳುತ್ತಾನೆ:

"ಓ ಈಮಾನನ್ನು ಪ್ರಾಪ್ತವಾಗಿಸಿಕೊಂಡವರೇ! ನಿಮ್ಮನ್ನು ಹಾಗೂ ನಿಮ್ಮ ಕುಟುಂಬದವರನ್ನು ಮಾನವರು ಮತ್ತು ಕಲ್ಲುಗಳು ಇಂಧನವಾಗಿರುವ ಆ ನರಕಾಗ್ನಿಯಿಂದ ರಕ್ಷಿಸಿಕೊಳ್ಳಿರಿ."* (ಕುರ್‌ಆನ್ - ಅತ್-ತಹ್ರೀಮ್: 6)

ಹಾಫಿಝ್ ಇಬ್ನು ಕಸೀರ್ (ರಹಿಮಹುಲ್ಲಾಹ್) ಅವರು ವಿವರಿಸುತ್ತಾರೆ: "ಅಂದರೆ, ಅವರಿಗೆ ಒಳ್ಳೆಯದನ್ನು ಆದೇಶಿಸಿರಿ, ಕೆಟ್ಟದ್ದನ್ನು ತಡೆಯಿರಿ ಮತ್ತು ಅವರನ್ನು ಅಲಕ್ಷ್ಯದಿಂದ ಬಿಡಬೇಡಿರಿ, ಇಲ್ಲವಾದರೆ ಕಿಯಾಮತ್ ದಿನದಂದು ಅವರನ್ನು ನರಕದ ಬೆಂಕಿ ಭಕ್ಷಿಸಿಬಿಡುವುದು."

**ಪುಣ್ಯವಂತ ಸಜ್ಜನರೇ:**

ಈ ಸವಾಲಿನ ಕಾಲಘಟ್ಟದಲ್ಲಿ ಮಕ್ಕಳನ್ನು ಸರಿಯಾಗಿ ಬೆಳೆಸಲು ನೆರವಾಗುವ ಅತ್ಯಂತ ಶ್ರೇಷ್ಠ ಹಾದಿಯೆಂದರೆ, ಬಾಲ್ಯದಿಂದಲೇ ಅವರ ಹೃದಯಗಳಲ್ಲಿ ಈಮಾನ್ (ವಿಶ್ವಾಸ) ಅನ್ನು ಬಿತ್ತುವುದು. ಹೃದಯವು ಈಮಾನಿನಿಂದ ತುಂಬಿದಾಗ ದೇಹದ ಅಂಗಾಂಗಗಳು ಸನ್ಮಾರ್ಗದಲ್ಲಿ ನಡೆಯುತ್ತವೆ, ನಡವಳಿಕೆಯು ಶುದ್ಧವಾಗುತ್ತದೆ ಮತ್ತು ಮಗುವಿನಲ್ಲಿ 'ಅಲ್ಲಾಹನು ನನ್ನನ್ನು ನೋಡುತ್ತಿದ್ದಾನೆ' ಎಂಬ ಜಾಗೃತಿ ತಾನಾಗಿಯೇ ಮೂಡುತ್ತದೆ. ಪರಿಣಾಮವಾಗಿ, ಯಾವುದೇ ಮೇಲ್ವಿಚಾರಕರಿಲ್ಲದಿದ್ದರೂ ಅವನು ನೇರ ಹಾದಿಯಲ್ಲೇ ಸಾಗುತ್ತಾನೆ.

ಇಬ್ನು ಅಬ್ಬಾಸ್ (ರಝಿಯಲ್ಲಾಹು ಅನ್ಹುಮಾ) ಅವರಿಂದ ವರದಿಯಾಗಿದೆ: "ಒಂದು ದಿನ ನಾನು ಪ್ರವಾದಿ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಅವರ ಹಿಂದೆ ವಾಹನದಲ್ಲಿ ಕುಳಿತಿದ್ದಾಗ ಅವರು ಹೇಳಿದರು: 'ಓ ಮಗುವೇ! ನಾನು ನಿನಗೆ ಕೆಲವು ಮಾತುಗಳನ್ನು ಕಲಿಸಿಕೊಡುತ್ತೇನೆ: ನೀನು ಅಲ್ಲಾಹನ ಧರ್ಮವನ್ನು ರಕ್ಷಿಸು, ಅಲ್ಲಾಹನು ನಿನ್ನನ್ನು ರಕ್ಷಿಸುವನು. ನೀನು ಅಲ್ಲಾಹನ ನೆನಪನ್ನು ಮನಸ್ಸಿನಲ್ಲಿಡು, ಅವನನ್ನು ನಿನ್ನ ಸಮ್ಮುಖದಲ್ಲೇ ಕಾಣುವೆ. ನೀನು ಏನನ್ನಾದರೂ ಬೇಡುವುದಿದ್ದರೆ ಅಲ್ಲಾಹನಲ್ಲೇ ಬೇಡು. ನೆರವು ಯಾಚಿಸುವುದಿದ್ದರೆ ಅಲ್ಲಾಹನಲ್ಲೇ ಯಾಚಿಸು. ಇಡೀ ಜಗತ್ತೇ ನಿನಗೆ ಲಾಭ ಉಂಟುಮಾಡಲು ಒಂದಾದರೆ, ಅಲ್ಲಾಹನು ನಿನಗೆ ಬರೆದಿಟ್ಟ ಹೊರತು ಬೇರೇನನ್ನೂ ನೀಡಲಾಗುವುದಿಲ್ಲ. ಮತ್ತು ಜಗತ್ತೇ ನಿನಗೆ ಕೇಡು ಉಂಟುಮಾಡಲು ಒಂದಾದರೆ, ಅಲ್ಲಾಹನು ನಿನಗೆ ಬರೆದಿಟ್ಟ ಹೊರತು ಬೇರೇನೂ ಕೇಡು ಮಾಡಲು ಸಾಧ್ಯವಿಲ್ಲ. ಲೇಖನಿಗಳನ್ನು ಎತ್ತಲಾಗಿದೆ ಮತ್ತು ಕಡತಗಳು ಒಣಗಿಯಾಗಿವೆ.'" (ತಿರ್ಮಿದೀ)

**ಸಜ್ಜನ ದಾಸರೇ!**

**ಮಕ್ಕಳಿಗೆ ಚಿಕ್ಕಂದಿನಿಂದಲೇ ಅಲ್ಲಾಹನ ಆಜ್ಞೆಗಳನ್ನು ಪಾಲಿಸಲು ಮತ್ತು ನಿಷೇಧಿಸಿದ ಕಾರ್ಯಗಳಿಂದ ದೂರವಿರಲು ತರಬೇತಿ ನೀಡುವುದು ಅತ್ಯಂತ ಉಪಯುಕ್ತ ಮಾರ್ಗವಾಗಿದೆ. ಅಲ್ಲಾಹನು ಹೇಳುತ್ತಾನೆ:**

**"ನಿಮ್ಮ ಕುಟುಂಬದವರಿಗೆ ನಮಾಝ್‌ನ ಆದೇಶ ನೀಡಿರಿ ಮತ್ತು ಅದರ ಮೇಲೆ ದೃಢವಾಗಿರಿ..." (ಕುರ್‌ಆನ್ - ತಾಹಾ: 132)**

**ಹಾಗೆಯೇ ಲುಕ್ಮಾನ್ (ಅಲೈಹಿಸ್ಸಲಾಮ್) ತಮ್ಮ ಮಗನಿಗೆ ನೀಡಿದ ಉಪದೇಶವನ್ನು ಕುರ್‌ಆನ್ ಹೀಗೆ ಉಲ್ಲೇಖಿಸುತ್ತದೆ:**

**"ಎಲೈ ನನ್ನ ಪ್ರೀತಿಯ ಮಗನೇ! ನಮಾಝನ್ನು ಸ್ಥಾಪಿಸು, ಒಳ್ಳೆಯದನ್ನು ಆದೇಶಿಸು, ಕೆಟ್ಟದ್ದನ್ನು ತಡೆ ಮತ್ತು ನಿನಗೆ ಎದುರಾಗುವ ಸಂಕಷ್ಟಗಳಲ್ಲಿ ತಾಳ್ಮೆ ತಳೆ. ಖಂಡಿತವಾಗಿಯೂ ಇದು ಅತ್ಯಂತ ದೃಢವಾದ ಕಾರ್ಯಗಳಲ್ಲಿ ಒಂದಾಗಿದೆ." (ಕುರ್‌ಆನ್ - ಲುಕ್ಮಾನ್: 17)**

**ಪ್ರವಾದಿ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಹೇಳಿದರು: "ನಿಮ್ಮ ಮಕ್ಕಳಿಗೆ ಏಳು ವರ್ಷವಾದಾಗ ನಮಾಝ್ ಮಾಡಲು ಆದೇಶಿಸಿರಿ, ಹತ್ತು ವರ್ಷವಾದಾಗಲೂ (ಓದದಿದ್ದರೆ) ಅದಕ್ಕಾಗಿ ಅವರನ್ನು ಗದರಿಸಿ/ಶಿಕ್ಷಿಸಿರಿ ಮತ್ತು ಅವರ ಹಾಸಿಗೆಗಳನ್ನು ಬೇರ್ಪಡಿಸಿರಿ." (ಅಬೂ ದಾವೂದ್, ತಿರ್ಮಿದೀ)**

**ಪ್ರವಾದಿಯವರು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಮಕ್ಕಳ ವಿಷಯದಲ್ಲಿ ವಿಶೇಷ ಕಾಳಜಿ ವಹಿಸುತ್ತಿದ್ದರು. ಅವರ ವಿಧಾನವು ಪ್ರೀತಿ, ಕರುಣೆ ಮತ್ತು ಆಸಕ್ತಿಯಿಂದ ಕೂಡಿದ ಶಿಕ್ಷಣವಾಗಿತ್ತು. ಮಗುವಿಗೆ ನಮಾಝಿನ ಮಹತ್ವ ತಿಳಿಸಲು ಮತ್ತು ಅಲ್ಲಾಹನೊಂದಿಗಿನ ಸಂಬಂಧವನ್ನು ಬಲಪಡಿಸಲು ಅವರ ನಮಾಝಿನ ಬಗ್ಗೆ ವಿಚಾರಿಸುತ್ತಿದ್ದರು. ಇಬ್ನು ಅಬ್ಬಾಸ್ (ರಝಿಯಲ್ಲಾಹು ಅನ್ಹುಮಾ) ಹೇಳುತ್ತಾರೆ: "ನಾನು ನನ್ನ ಚಿಕ್ಕಮ್ಮ ಮೈಮೂನಾ ಅವರ ಮನೆಯಲ್ಲಿ ರಾತ್ರಿ ತಂಗಿದ್ದೆ. ಪ್ರವಾದಿಯವರು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ರಾತ್ರಿ ಬಂದಾಗ, 'ಈ ಬಾಲಕ ನಮಾಝ್ ಮಾಡಿದನೇ?' ಎಂದು ಕೇಳಿದರು. ಮನೆಯವರು 'ಹೌದು' ಎಂದರು." (ಅಬೂ ದಾವೂದ್)**

**ಪ್ರವಾದಿಯವರ ಬೋಧನೆಯು ಕೇವಲ ಆರಾಧನೆಗೆ ಸೀಮಿತವಾಗಿರಲಿಲ್ಲ, ಬದಲಿಗೆ ಊಟ-ತಿಂಡಿಯಂತಹ ದೈನಂದಿನ ಶಿಷ್ಟಾಚಾರಗಳಿಗೂ ವಿಸ್ತರಿಸಿತ್ತು. ಉಮರ್ ಬಿನ್ ಅಬೀ ಸಲಮ (ರಝಿಯಲ್ಲಾಹು ಅನ್ಹುಮಾ) ಹೇಳುತ್ತಾರೆ: "ನಾನು ಪ್ರವಾದಿಯವರ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಮನೆಯಲ್ಲಿ ಬೆಳೆಯುತ್ತಿದ್ದ ಮಗುವಾಗಿದ್ದೆ. ಊಟ ಮಾಡುವಾಗ ನನ್ನ ಕೈ ತಟ್ಟೆಯಲ್ಲೆಲ್ಲಾ ಹರಿಯುತ್ತಿತ್ತು. ಆಗ ಪ್ರವಾದಿಯವರು ನನಗೆ ಹೇಳಿದರು: 'ಓ ಬಾಲಕ! ಅಲ್ಲಾಹನ ಹೆಸರು ಹೇಳು (ಬಿಸ್ಮಿಲ್ಲಾಹ್ ಅನ್ನು), ನಿನ್ನ**

ಬಲಗೈಯಿಂದ ತಿನ್ನು ಮತ್ತು ನಿನ್ನ ಮುಂದಿರುವುದನ್ನು ತಿನ್ನು'. ಆ ಬಳಿಕ ನನ್ನ ಉಣ್ಣುವ ಶೈಲಿ ಸದಾ ಹೀಗೆಯೇ ಇತ್ತು." (ಬುಖಾರಿ, ಮುಸ್ಲಿಂ)

**ಸಹೋದರರೇ:**

ಇಂದಿನ ಕಾಲದಲ್ಲಿ ಮಕ್ಕಳ ಸಂಸ್ಕಾರವನ್ನು ಹಾಳುಮಾಡುತ್ತಿರುವ ಪ್ರಮುಖ ಮಾತು ಎಂದರೆ: "ಅವನು ಇನ್ನೂ ಚಿಕ್ಕವನು, ಬಿಟ್ಟುಬಿಡಿ"ಎಂಬುದು. ಈ ಮಾತು ತಪ್ಪುಗಳನ್ನು ಸಮರ್ಥಿಸುತ್ತದೆ, ಸುಧಾರಣೆಯ ಬೆಳಕನ್ನು ನಂದಿಸುತ್ತದೆ ಮತ್ತು ನಿರ್ಲಕ್ಷ್ಯಕ್ಕೆ ಬಾಗಿಲು ತೆರೆಯುತ್ತದೆ. ಇದರಿಂದ ಮಗನು ತನಗೆ ತೋಚಿದ್ದನ್ನು ಮಾಡುತ್ತಾನೆ, ಯಾರೂ ತಡೆಯುವುದಿಲ್ಲ; ಮಗಳು ತನಗೆ ಇಷ್ಟ ಬಂದ ಉಡುಪು ಧರಿಸುತ್ತಾಳೆ, ಯಾರೂ ಪ್ರಶ್ನಿಸುವುದಿಲ್ಲ. ಕೊನೆಗೆ ಈ ಪೀಳಿಗೆಯು ತಪ್ಪನ್ನೇ ಅಭ್ಯಾಸ ಮಾಡಿಕೊಂಡು ಬೆಳೆಯುತ್ತದೆ. ಆದರೆ ಬಾಲ್ಯದಲ್ಲೇ ಉತ್ತಮವಾಗಿ ಬೆಳೆಸಿದ ಮಗುವಿನ ಜೀವನವು ಬೆಳೆಯುತ್ತಾ ಹೋದಂತೆ ವಿಕಸಿತಗೊಳ್ಳುತ್ತದೆ.

ಅಬೂ ಹುರೈರ (ರಳಿಯಲ್ಲಾಹು ಅನ್ಹು) ವರದಿ ಮಾಡುತ್ತಾರೆ: ಹಸನ್ ಬಿನ್ ಅಲಿ (ರಳಿಯಲ್ಲಾಹು ಅನ್ಹುಮಾ) ಝಕಾತಿನ ಹಣ್ಣುಗಳಲ್ಲಿ ಒಂದನ್ನು ಬಾಯಿಗೆ ಹಾಕಿಕೊಂಡಾಗ, ಪ್ರವಾದಿಯವರು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) "ಖಿಃ... ಖಿಃ..." (ಛೀ... ಛೀ...) ಎಂದು ಹೇಳಿ ಅದನ್ನು ಉಗುಳಿಸಿದರು. ನಂತರ, "ನಾವು (ಪ್ರವಾದಿಯವರ ಕುಟುಂಬ) ಝಕಾತ್ ಸ್ವೀಕರಿಸುವುದಿಲ್ಲ ಎಂಬುದು ನಿನಗೆ ತಿಳಿಯದೇ?" ಎಂದರು.

ಇಬ್ನುಲ್ ಕಯ್ಯಿಮ್ (ರಹಿಮಹುಲ್ಲಾಹ್) ಹೇಳುತ್ತಾರೆ: "ಯಾರು ತನ್ನ ಮಗುವಿಗೆ ಉಪಯುಕ್ತವಾದದ್ದನ್ನು ಕಲಿಸದೆ ಅಲಕ್ಷಿಸುತ್ತಾನೋ, ಅವನು ಮಗುವಿಗೆ ಅತಿಯಾದ ದ್ರೋಹ ಎಸಗಿದಂತೆ. ಮಕ್ಕಳ ಹಾಳಾಗುವಿಕೆಗೆ ಮುಖ್ಯ ಕಾರಣ ತಂದೆ-ತಾಯಂದಿರ ನಿರ್ಲಕ್ಷ್ಯವೇ ಆಗಿದೆ. ಅವರು ಬಾಲ್ಯದಲ್ಲಿ ಧರ್ಮದ ಕರ್ತವ್ಯಗಳನ್ನು ಕಲಿಸದೆ ಹಾಳುಗೆಡವಿದರು, ಪರಿಣಾಮವಾಗಿ ಆ ಮಕ್ಕಳು ತಮಗೂ ಪ್ರಯೋಜನವಾಗಲಿಲ್ಲ, ಹೆತ್ತವರಿಗೂ ಉಪಯೋಗಕ್ಕೆ ಬರಲಿಲ್ಲ."

ಉತ್ತಮ ಗುಣಗಳು ಗಿಡದಂತೆ ಬೆಳೆಯುತ್ತವೆ... ಸತ್ಕರ್ಮಗಳ ನೀರನ್ನು ಎರೆಯುತ್ತಿದ್ದರೆ. ರಕ್ಷಕನು ಸೂಕ್ತ ಕಾಳಜಿ ವಹಿಸಿದರೆ...* ಅದು ಸದ್ಗುಣದ ಕೊಂಬೆಗಳಲ್ಲಿ ಫಲ ನೀಡುತ್ತದೆ!*

ಅಲ್ಲಾಹನು ನಮಗೂ ನಿಮಗೂ ಈ ಮಹಾನ್ ಕುರ್‌ಆನ್‌ನಲ್ಲಿ ಶುಭ ತರಲಿ, ಮತ್ತು ಇದರಲ್ಲಿರುವ ವಾಕ್ಯಗಳು ಹಾಗೂ ಉಪದೇಶಗಳಿಂದ ನಮಗೆ ಲಾಭವನ್ನು ತರಲಿ. ನಾನು ಈ ಮಾತನ್ನು ಹೇಳುತ್ತಾ, ನನಗಾಗಿ ಮತ್ತು ನಿಮಗಾಗಿ ಅಲ್ಲಾಹನಲ್ಲಿ ಕ್ಷಮೆಯಾಚಿಸುತ್ತೇನೆ. ನೀವೂ ಆತನಲ್ಲಿ ಕ್ಷಮೆಯಾಚಿಸಿ ಮತ್ತು ಆತನತ್ತ

ಪಶ್ಚಾತ್ತಾಪಪಡಿ; ನಿಶ್ಚಯವಾಗಿಯೂ ಆತನು ಅತ್ಯಂತ ಕ್ಷಮಾದಾತನೂ ಕರುಣಾಮಯಿಯೂ ಆಗಿದ್ದಾನೆ.

## ಎರಡನೇ ಪ್ರವಚನ:

ಎಲ್ಲ ಪ್ರಶಂಸೆಗಳೂ ಅಲ್ಲಾಹನಿಗೆ ಮಾತ್ರ ಸಲ್ಲುತ್ತವೆ. ಆತನ ಅನುಗ್ರಹಗಳಿಗಾಗಿ ಸ್ತುತಿಗಳು, ಆತನ ಕೃಪೆಗೆ ಧನ್ಯವಾದಗಳು. ಆತನ ಸಂದೇಶ ಹಾಗೂ ಉದ್ದೇಶದ ಕಡೆಗೆ ಆಹ್ವಾನಿಸಿದ ಪ್ರವಾದಿ ಮುಹಮ್ಮದ್ ﷺ ಅವರ ಮೇಲೆಯೂ, ಅವರ ಪರಿವಾರದವರ ಹಾಗೂ ಸಹಚರರ ಮೇಲೆಯೂ ಅಂತಿಮ ದಿನದವರೆಗೆ ಅವರ ಮಾರ್ಗವನ್ನು ಅನುಸರಿಸುವ ಪ್ರತಿಯೊಬ್ಬರ ಮೇಲೆಯೂ ಶಾಂತಿ-ಸಮ್ಮಾನಗಳು ಸದಾ ಇರಲಿ.

**ಓ ಅಲ್ಲಾಹನ ದಾಸರೇ,** ಅಲ್ಲಾಹನಿಗೆ ಹೆದರಿ ಜೀವಿಸಿರಿ. ರಹಸ್ಯದಲ್ಲೂ ಬಹಿರಂಗದಲ್ಲೂ ಆತನನ್ನು ಸ್ಮರಿಸಿರಿ, ಮತ್ತು ನೀವೆಲ್ಲರೂ ಆತನ ಬಳಿಗೇ ಮರಳಬೇಕಾಗಿದೆ ಎಂಬುದನ್ನು ನೆನಪಿನಲ್ಲಿಡಿರಿ.

**ಸಹೋದರರೇ!** ಮಕ್ಕಳನ್ನು ಸರಿಯಾಗಿ ಬೆಳೆಸಲು ಅತ್ಯಂತ ಪ್ರಭಾವಶಾಲಿ ಮಾರ್ಗವೆಂದರೆ: "ಉತ್ತಮ ಆದರ್ಶ ಮತ್ತು ಮಾದರಿಯಾಗುವುದು" . ಇದು ಯಾವುದೇ ಶಬ್ದಗಳಿಲ್ಲದ ಶಿಕ್ಷಣ. ಮಗುವಿನ ಮನಸ್ಸಿನಲ್ಲಿ ಇದು ಮೌನವಾಗಿ ಕೆಲಸ ಮಾಡುತ್ತದೆ. ಹೆತ್ತವರ ನಡವಳಿಕೆಯನ್ನು ನೋಡಿ ಮಗು ತಾನಾಗಿಯೇ ಕಲಿಯುತ್ತದೆ. ಆದ್ದರಿಂದ, ಹೆತ್ತವರ ಮಾತಿಗೂ ಮತ್ತು ಕೃತಿಗೂ ವ್ಯತ್ಯಾಸವಿದ್ದಾಗ ಮಗುವಿನ ಮನಸ್ಸಿನಲ್ಲಿ ತೀವ್ರ ಗೊಂದಲ ಉಂಟಾಗುತ್ತದೆ. ಅಲ್ಲಾಹನು ತನ್ನ ಪ್ರವಾದಿಗೆ ಹಿಂದಿನ ಪ್ರವಾದಿಗಳ ಮಾರ್ಗವನ್ನು ಅನುಸರಿಸಲು ಆದೇಶಿಸಿದನು:

"ಅವರು ಅಲ್ಲಾಹನು ಸನ್ಮಾರ್ಗ ತೋರಿದವರಾಗಿದ್ದಾರೆ, ಆದ್ದರಿಂದ ನೀವೂ ಅವರ ಮಾರ್ಗವನ್ನೇ ಅನುಸರಿಸಿರಿ."* (ಕುರ್‌ಆನ್ - ಅಲ್-ಅನ್‌ಆಮ್: 90)

ಹಾಗೆಯೇ ಈ ಉಮ್ಮತ್ತಿಗೆ ಪ್ರವಾದಿಯವರನ್ನು ಆದರ್ಶವಾಗಿ ಸ್ವೀಕರಿಸಲು ತಿಳಿಸಿ "ಖಂಡಿತವಾಗಿಯೂ ನಿಮಗಾಗಿ ಅಲ್ಲಾಹನ ರಸpointರಲ್ಲಿ ಉತ್ತಮವಾದ ಆದರ್ಶವಿದೆ..." ಎಂದು ಆದೇಶಿಸಿದನು. (ಕುರ್‌ಆನ್ - ಅಲ್-ಅಹ್ಝಾಬ್: 21)

ಇದರಿಂದ ತಿಳಿಯುವುದೇನೆಂದರೆ, ಉತ್ತಮ ಆದರ್ಶ ವ್ಯಕ್ತಿಗಳಿರುವುದು ಸಮಾಜ ನಿರ್ಮಾಣದ ಮೂಲಸ್ತಂಭವಾಗಿದೆ.

**ಶುಭ್ರ ಮನಸ್ಸಿನವರೇ!**

ಮಕ್ಕಳ ಸಂಸ್ಕಾರದಲ್ಲಿ ಮತ್ತೊಂದು ಪ್ರಮುಖ ಹಾದಿಯೆಂದರೆ: ಅವರ ಆಸಕ್ತಿಗಳನ್ನು ಗಮನಿಸುವುದು, ಅವರ ಆಲೋಚನೆಗಳನ್ನು ಅರ್ಥೈಸಿಕೊಳ್ಳುವುದು ಮತ್ತು ಅವರೊಂದಿಗೆ ಸಂವಹನ ನಡೆಸುವುದು. ಇದರಿಂದ ಅಂತರ ಕಡಿಮೆಯಾಗಿ ಮಕ್ಕಳು ಮುಕ್ತವಾಗಿ ಮಾತನಾಡಲು ಸುರಕ್ಷಿತ ಭಾವನೆ ಪಡೆಯುತ್ತಾರೆ. ಆಗ

**ಹೆತ್ತವರು ಕೇವಲ ಅಧಿಕಾರಿಯಾಗದೆ ಒಬ್ಬ ಸ್ನೇಹಿತನಂತೆ, ಮಾರ್ಗದರ್ಶಕನಂತೆ ಪ್ರೀತಿ ಮತ್ತು ಗೌರವ ಎರಡನ್ನೂ ಕಾಯ್ದುಕೊಳ್ಳುತ್ತಾರೆ.**

**ಇಬ್ರಾಹೀಮ್ (ಅಲೈಹಿಸ್ಸಲಾಮ್) ಮತ್ತು ಅವರ ಮಗ ಇಸ್ಮಾಈಲ್ (ಅಲೈಹಿಸ್ಸಲಾಮ್) ನಡುವೆ ನಡೆದ ಮಾತುಕತೆಯನ್ನು ಗಮನಿಸಿ:**

**"ಮಗನೇ! ನಿನ್ನನ್ನು ಬಲಿ ನೀಡುತ್ತಿರುವುದಾಗಿ ನಾನು ಕನಸಿನಲ್ಲಿ ಕಾಣುತ್ತಿದ್ದೇನೆ, ನಿನ್ನ ಅಭಿಪ್ರಾಯವೇನು?' ಎಂದು ಕೇಳಿದರು. ಅದಕ್ಕೆ ಮಗನು: 'ಅಪ್ಪಾ! ನಿಮಗೆ ನೀಡಲಾದ ಆಜ್ಞೆಯನ್ನು ಪಾಲಿಸಿರಿ, ಅಲ್ಲಾಹನು ಇಚ್ಛಿಸಿದರೆ ನನ್ನನ್ನು ತಾಳ್ಮೆ ತಳೆಯುವವರ ಸಾಲಿನಲ್ಲಿ ಕಾಣುವಿರಿ' ಎಂದರು." (ಕುರ್‌ಆನ್ - ಅಸ್-ಸಾಫ್ಫಾತ್: 102)**

**ಹಾಗೆಯೇ ಯೂಸುಫ್ (ಅಲೈಹಿಸ್ಸಲಾಮ್) ತಮಗೆ ಬಿದ್ದ ಕನಸನ್ನು ತಮ್ಮ ತಂದೆಯ ಬಳಿ ಮಾತ್ರ ಹಂಚಿಕೊಂಡರು. ಏಕೆಂದರೆ ರಹಸ್ಯಗಳನ್ನು ನಂಬಿಕಸ್ಥರ ಬಳಿ ಮಾತ್ರ ಹೇಳಲಾಗುತ್ತದೆ:**

**"ಯೂಸುಫರು ತಮ್ಮ ತಂದೆಯ ಬಳಿ: 'ಅಪ್ಪಾ! ನಾನು (ಕನಸಿನಲ್ಲಿ) ಹನ್ನೊಂದು ನಕ್ಷತ್ರಗಳು, ಸೂರ್ಯ ಮತ್ತು ಚಂದ್ರರು ನನಗೆ ಸಾಷ್ಟಾಂಗ ನಮಸ್ಕರಿಸುವುದನ್ನು ಕಂಡೆ' ಎಂದಾಗ..."* (ಕುರ್‌ಆನ್ - ಯೂಸುಫ್: 4)**

**ತಂದೆ-ತಾಯಿ ತೀರಿಕೊಂಡು ಅನಾಥನಾದವನು ನಿಜವಾದ ಅನಾಥನಲ್ಲ...***

**ಬದಲಿಗೆ, ತಾಯಿಯಿದ್ದು ತೊರೆದುಹೋದರೆ, ತಂದೆಯಿದ್ದು ಕೆಲಸದಲ್ಲಿ ಮುಳುಗಿ ಸಮಯ ನೀಡದಿದ್ದರೆ... ಆ ಮಗುವೇ ನಿಜವಾದ ಅನಾಥ!***

**ಯಾ ಅಲ್ಲಾಹ್, ನಮ್ಮ ಮನಸ್ಸಿಗೆ ಈಮಾನ್ ಅಥವಾ ಸತ್ಯವಿಶ್ವಾಸವನ್ನು ಇಷ್ಟವಾಗಿಸು ಮತ್ತು ಅದನ್ನು ನಮ್ಮ ಹೃದಯಗಳಲ್ಲಿ ಸುಂದರಗೊಳಿಸು. ಅಧರ್ಮ, ಪಾಪ ಹಾಗೂ ಅನಾದರಗಳನ್ನು ನಮಗೆ ಅಪ್ರಿಯಗೊಳಿಸು. ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಯುವವರನ್ನಾಗಿ ಮಾಡು. ಇಸ್ಲಾಂ ಮತ್ತು ಮುಸ್ಲಿಮರಿಗೆ ಘನತೆಯನ್ನು ತಂದುಕೊಡು. ಓ ಅಲ್ಲಾಹ್, ಕುವೈತ್ ದೇಶವನ್ನು ಮತ್ತು ಅದರ ಜನರನ್ನು ಎಲ್ಲ ಕೆಡುಕುಗಳಿಂದ ಕಾಯ್ದಿರಿಸು. ಈ ದೇಶವನ್ನು ಮತ್ತು ಇತರ ಎಲ್ಲ ಮುಸ್ಲಿಂ ದೇಶಗಳನ್ನು ಶಾಂತಿ-ನೆಮ್ಮದಿಯ ಧಾಮವನ್ನಾಗಿ ಮಾಡು. ನಮ್ಮ ಗಡಿ ಕಾಯುವ ಸೈನಿಕರನ್ನು ಮತ್ತು ದೇಶದ ಸುರಕ್ಷತೆಗೆ ಶ್ರಮಿಸುವವರನ್ನು ರಕ್ಷಿಸು. ನಮ್ಮ ಆಡಳಿತಗಾರರಿಗೆ ಮತ್ತು ಅವರ ಉತ್ತರಾಧಿಕಾರಿಗಳಿಗೆ ನಿನ್ನ ಮೆಚ್ಚುಗೆಯ ದಾರಿಯಲ್ಲಿ ನಡೆಯಲು ತೌಫೀಕ್ ನೀಡು. ನಮ್ಮ ಕೊನೆಯ ಪ್ರಾರ್ಥನೆ: ಎಲ್ಲ ಪ್ರಶಂಸೆಗಳೂ ಸರ್ವಲೋಕಗಳ ಒಡೆಯನಾದ ಅಲ್ಲಾಹನಿಗೆ ಮಾತ್ರ ಸಲ್ಲಿಕೆ.**